## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ಲೋಕಾಯುಕ್ತ ಸಂಸ್ಥೆಯ ಪ್ರಧಾನ ಕಛೇರಿ ಬೆಂಗಳೂರಿಗೆ ತಾತ್ಕಾಲಿಕವಾಗಿ ಹೆಚ್ಚುವರಿಯಾಗಿ ಅಪರ ನಿಬಂಧಕರು(ವಿಚಾರಣೆಗಳು) ಮತ್ತು ಸಹಾಯಕ ಸಿಬ್ಬಂದಿ ಹುದ್ದೆಗಳನ್ನು ಸೃಜಿಸುವ ಬಗ್ಗೆ.

*****

ಓದಲಾಗಿದೆ:

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರ ಸಂಖ್ಯೆ: ಕಲೋ/ಸಿಬ್ಬಂದಿ(1)/61/2010-2011, ದಿನಾಂಕ:23.01.2020.

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಇವರು ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿನ ವಿಚಾರಣೆಗಳು ಶಾಖೆಯಲ್ಲಿ 10325 ದೂರುಗಳು ಮತ್ತು 6791 ಇಲಾಖಾ ವಿಚಾರಣೆ ಪ್ರಕರಣಗಳು ಬಾಕಿ ಇದ್ದು ಇಲಾಖಾ ವಿಚಾರಣೆ ಪ್ರಕರಣದಲ್ಲಿನ ವಿವಿಧ ಬಗೆಯ ದುರ್ನಡತೆ, ಕರ್ತವ್ಯಲೋಪವನ್ನು ಮತ್ತು ಅವುಗಳ ಬಗ್ಗೆ ಕಾನೂನಾತ್ಮಕ ದೃಷ್ಟಿಯಿಂದ ವಿಚಾರಣೆ ನಡೆಸುವ ಬಗ್ಗೆ ಪರಿಗಣನೆಗೆ ತೆಗೆದುಕೊಂಡಾಗ ಒಬ್ಬ ಅಪರ ನಿಬಂಧಕರು (ವಿಚಾರಣೆಗಳು) ತಿಂಗಳಿಗೆ ಗರಿಷ್ಠ 07 ರಿಂದ 10 ಇಲಾಖಾ ವಿಚಾರಣಾ ಪ್ರಕರಣಗಳನ್ನು ಹಾಗೂ ಗರಿಷ್ಠ 25 ದೂರು ಪ್ರಕರಣಗಳನ್ನು ವಿಲೇಗೊಳಿಸಬಹುದಾಗಿರುತ್ತದೆಂದು ತಿಳಿಸಿರುತ್ತಾರೆ.

ಮುಂದುರೆವರೆದು, ವರ್ಷಾವಾರು ದಾಖಲಾಗಿರುವ ಪ್ರಕರಣಗಳನ್ನು ಆದ್ಯತೆಯ ಮೇರೆಗೆ ಅವಶ್ಯವಾಗಿ ವಿಲೇವಾರಿ ಮಾಡಲೇಬೇಕಾಗಿರುವುದರಿಂದ ಹೆಚ್ಚಿನ ವಿಚಾರಣಾಧಿಕಾರಿಗಳನ್ನು ನೇಮಿಸಿದಾಗ ಮಾತ್ರ ದೂರು ಪ್ರಕರಣಗಳು ಹಾಗೂ ಇಲಾಖಾ ವಿಚಾರಣಾ ಪ್ರಕರಣಗಳ ಹೆಚ್ಚಿನ ವಿಲೇವಾರಿಗೆ ಸಾಧ್ಯವಾಗುತ್ತದೆ. ವಿಚಾರಣೆಗಳು ತಡವಾದಲ್ಲಿ, ಆಡಳಿತ ದೃಷ್ಟಿಯಿಂದ ತೊಂದರೆಯಾಗುವುದಲ್ಲದೇ ತಪ್ಪಿತಸ್ಥ ನೌಕರರು ಮತ್ತು ಅಧಿಕಾರಿಗಳು ಕರ್ತವ್ಯದಲ್ಲಿ ಮುಂದುವರಿದು ಮತ್ತಷ್ಟು ಭ್ರಷ್ಟಾಚಾರ ಮಾಡುವ ಸಾಧ್ಯತೆ ಇರುತ್ತದೆ ಮತ್ತು ಅವರು ವಿಚಾರಣೆಯ

10030/2020-21
17/11/2020

--- 2 -)

ಸಂದರ್ಭದಲ್ಲಿ ಸರ್ಕಾರಿ ಸೇವೆಯಿಂದ ನಿವೃತ್ತಿಯಾದಲ್ಲಿ ನಂತರ ಸೂಕ್ತ ಶಿಕ್ಷೆ ವಿಧಿಸಲು ಸಾಧ್ಯವಾಗುವುದಿಲ್ಲ. ಪ್ರಮುಖವಾಗಿ ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ಬಾಕಿಯಿರುವ ಹಳೆಯ ಇಲಾಖಾ ವಿಚಾರಣಾ ಪ್ರಕರಣಗಳನ್ನು ಆದ್ಯತೆಯ ಮೇರೆಗೆ ತ್ವರಿತವಾಗಿ ಇತ್ಯರ್ಥ ಪಡಿಸಲು ಅನುವಾಗುವಂತೆ ಈ ಕೆಳಕಂಡ 20 ಹುದ್ದೆಗಳನ್ನು ತಾತ್ಕಾಲಿಕವಾಗಿ ಸೃಜಿಸಲು ಗೌರವಾನ್ವಿತ ಲೋಕಾಯುಕ್ತರ ನಿರ್ದೇಶನದನ್ವಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ.

| ಕ್ರ. ಸಂ. | ಹುದ್ದೆಗಳು | ಹುದ್ದೆಗಳ ಸಂಖ್ಯೆ |
|---|---|---|
| 1 | ಅಪರ ನಿಬಂಧಕರು(ವಿಚಾರಣೆಗಳು) | 04 |
| 2 | ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು (ಮಂಡನಾಧಿಕಾರಿ) | 04 |
| 3 | ತೀರ್ಪುಬರಹಗಾರರು | 04 |
| 4 | ಪ್ರಥಮ ದರ್ಜೆ ಸಹಾಯಕರು | 04 |
| 5 | ದಲಾಯತ್ (ಗ್ರೂಪ್–ಡಿ) | 04 |
| | ಒಟ್ಟು | 20 |

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 59 ಸೇಲೋಯು 2019**

**ಬೆಂಗಳೂರು, ದಿನಾಂಕ:12.11.2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ದಾಖಲಾಗಿರುವ ಇಲಾಖಾ ವಿಚಾರಣಾ ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥಗೊಳಿಸಲು ಅನುವಾಗುವಂತೆ ಕರ್ನಾಟಕ ಲೋಕಾಯುಕ್ತ ಸಂಸ್ಥೆಗೆ ಈ ಕೆಳಕಂಡ ಒಟ್ಟು 20 ಹುದ್ದೆಗಳನ್ನು ನೇಮಕಾತಿ ವಿಧಾನದೊಂದಿಗೆ ಒಂದು ವರ್ಷದ ಅವಧಿಗೆ ತಾತ್ಕಾಲಿಕವಾಗಿ ಸೃಜಿಸಿ ಆದೇಶಿಸಿದೆ.

| ಕ್ರ. ಸಂ. | ಹುದ್ದೆಗಳು | ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ |
|---|---|---|---|
| 1 | ಅಪರ ನಿಬಂಧಕರು(ವಿಚಾರಣೆಗಳು) | 04 | ನಿಯೋಜನೆ/ಗುತ್ತಿಗೆ |
| 2 | ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು (ಮಂಡನಾಧಿಕಾರಿ) | 04 | ನಿಯೋಜನೆ/ಗುತ್ತಿಗೆ |
| 3 | ತೀರ್ಪುಬರಹಗಾರರು | 04 | ನಿಯೋಜನೆ/ಹೊರಗುತ್ತಿಗೆ |

| | | | |
|---|---|---|---|
| 4 | ಪ್ರಥಮ ದರ್ಜೆ ಸಹಾಯಕರು | 04 | ಹೊರಗುತ್ತಿಗೆ |
| 5 | ದಲಾಯತ್ (ಗ್ರೂಪ್—ಡಿ) | 04 | ಹೊರಗುತ್ತಿಗೆ |
| | ಒಟ್ಟು | 20 | |

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ.ಆಇ 301 ಎಫ್ಆರ್‌ಸಿ 2020(ಇ) ದಿನಾಂಕ:06.11.2020ರ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

12/11/2020
(ಅಂಜನಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಜಾಗೃತ ವಿಭಾಗ)

ಇವರಿಗೆ:

1) ಪ್ರಧಾನ ಮಹಾಲೇಖಪಾಲರು (ಜಿ & ಎಸ್ಎಸ್ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
2) ಪ್ರಧಾನ ಮಹಾಲೇಖಪಾಲರು(ಇ & ಆರ್‌ಎಸ್ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
3) ಪ್ರಧಾನ ಮಹಾಲೇಖಪಾಲರು(ಎ &ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು-560001.
4) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
5) ಶಾಖಾಧಿಕಾರಿ, ಆರ್ಥಿಕ ಇಲಾಖೆ(ವೆಚ್ಚ-12), ವಿಧಾನಸೌಧ, ಬೆಂಗಳೂರು.
6) ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.